

ಶಿಥಿಲಗೊಂಡಿರುವ
ಪ್ರಾಚೀನ ಮಂಟಪ

ದೊಡ್ಡದಾದ ಮೈದಾಳ ಕೆರೆ ಪಕ್ಕದ ಬೆಟ್ಟದ ಬುಡದಲ್ಲಿ ಹರವಿ ಮಲಗಿರುವುದು ಕಂಡಿತು.

ಉದ್ದಕ್ಕೂ ಹರಡಿದ ಬಂಡೆಗಳ ನಡುವೆ ಬೆಳೆದ ಪೊದೆಗಳ ಮೂಲಕ ಹಸು, ಕುರಿ, ಮೇಕೆಗಳು ಮೇಯಲು ಹಾಯ್ದು ಮಾಡಿದ ಸಣ್ಣ ಕಾಲುದಾರಿ ಕಂಡಿತು. ಇಂದಿನ ಈ ಮೈದಾಳ ಕೆರೆಯೇ ಶಾಸನದಲ್ಲಿ ಉಲ್ಲೇಖಿಸಿದ ಮಯ್ದುವೊಳಲ ದಿವ್ಯ ತೀರ್ಥ ಮತ್ತು ಅದಕ್ಕಂಟಿದ ಆ ಬದಿಯ ಬೆಟ್ಟ ತೀರ್ಥದ ಬೆಟ್ಟ ಇರಬಹುದೆ ಎಂದು ಯೋಚಿಸಿದೆ. ಇವೆರಡೂ ಮಾಚಿಯಕ್ಕ ಪದ್ಮಾವತಿ ಕೆರೆ ಕಟ್ಟಿಸುವ ಮೊದಲೇ ಇದ್ದವು.

ಮತ್ತೆ ಬೆಟ್ಟದ ಮೇಲೆ ಒಂದು ಸುತ್ತು ಬಂದೆ. ಕೋಟೆಗೋಡೆಯ ವಾಯವ್ಯ ದಿಕ್ಕಿಗೆ ಒಂದು ಸಣ್ಣ ಕೆರೆ ಕಲ್ಲುಬಂಡೆಯ ಒಡಲಲ್ಲಿತ್ತು. ಕೆರೆಗೆ ಇಳಿಜಾರಾಗಿ ಇಳಿದ ಬದಿಯ ಬೆಟ್ಟದಲ್ಲಿ ಒಂದು ಬೃಹತ್ ಬಂಡೆ ನಿಂತಿತ್ತು. ಅದರ ಮೇಲೆ ಕೆತ್ತನೆಯ ಮಾಸಲು ಗೆರೆಯಲ್ಲಿ ಮೂಡಿಸಿದ ತೀರ್ಥಂಕರರ ನಿಂತ ಭಂಗಿಯ ಚಿತ್ರಗಳು ಬಣ್ಣದಿಂದ ಎದ್ದು ಕಾಣುವಂತಾಗಿದ್ದವು. ಈ ಬಂಡೆಯ ಬಳಿಯೇ ಎರಡು ಮುರಿದ ಶಿಲಾಸ್ತಂಭಗಳು ಕಲ್ಲಿನ ಮೇಲೆ ಬಿದ್ದಿದ್ದವು. ಅವು ಜೈನ ಬಸದಿಯ ಮಾನಸ್ತಂಭಗಳಂತೆ ಕಂಡವು.

## ಶಿಥಿಲ ದೇವಾಲಯ

ಈಗ ಎದುರಿಗೆ, ಸಣ್ಣದೊಂದು ಕೊಳದ ಆ ಬದಿಗೆ ಪೊದೆಗಳ ನಡುವೆ, ಬೀಳುವಂತೆ ಬಾಗಿದ ಕಂಬಗಳ ಒಂದು ಶಿಥಿಲ ಮಂಟಪ ಕಂಡಿತು. ಮಂಟಪದ ಹಿಂಬಂದಿಗೆ ಹೆಬ್ಬಂಡೆಯಿತ್ತು. ಬೆಟ್ಟದಿಂದ ಇಳಿದು ಅತ್ತ ನಡೆದೆ. ತೊಲೆಗಂಬಗಳು ಮುರಿದು ಅಭದ್ರವಾಗಿ ನಿಂತಿದ್ದವು. ಪೊದೆಗಳನ್ನು ಸರಿಸಿ ಒಳಗೆ ಹೊಕ್ಕಾಗ ಅಲ್ಲಿ ಹೆಬ್ಬಂಡೆಯ ಮೇಲೆ ಕಡೆದ ಪದ್ಮಾಸನದಲ್ಲಿ ಕುಳಿತ ತೀರ್ಥಂಕರರ ಮೂರ್ತಿ ಪೂರ್ತಿ ಹಾಳಾಗಿದ್ದು ಕಂಡು ಅತ್ಯಾಶ್ಚರ್ಯ ಮತ್ತು ವಿಷಾದ ಒಟ್ಟಿಗೇ ಆಗಿತ್ತು.

ತೀರ್ಥಂಕರ ಪೀಠದಲ್ಲಿ ಮೂರು ಹುಲಿಗಳ ಕೆತ್ತನೆ ವಿಶೇಷವಾಗಿ ಕಂಡಿತು. ಎಡಕ್ಕೂ ಬಲಕ್ಕೂ, ಮುಂಗಾಲುಗಳನ್ನು ಎತ್ತಿ ಎದ್ದು ನಿಂತ ಎರಡು ಹುಲಿಗಳ ಕೆತ್ತನೆ ಇತ್ತು. ಮತ್ತೂ ಸೂಕ್ಷ್ಮವಾಗಿ ಗಮನಿಸಿದಾಗ, ಪೀಠದ ಬಗಲಿಗೆ ಎರಡೂ ಕಡೆಯಲ್ಲಿ ಆನೆಯ ಮುಖ ಮತ್ತು ಅದರ ಕಾಲಿನ ಕೆತ್ತನೆ ಸಂಪೂರ್ಣ ಹಾಳಾಗಿದ್ದರೂ, ನೆರಳಿನಂತೆ ಕಾಣಸಿಕ್ಕಿತು. ತೀರ್ಥಂಕರರ ಎಡಭಾಗದಲ್ಲಿ ನಾಲ್ಕು ತೆರೆದ ಹಸ್ತಗಳು ಕಂಡವು. ಇವು ಹಾಳಾಗಿರಲಿಲ್ಲ. ತೀರ್ಥಂಕರರ ತಲೆಯ ಮೇಲೆ ಇದ್ದದ್ದು, ಸರ್ಪಗಳ ಹೆಡೆಯೇ, ಛತ್ರಿಯೇ, ಇಲ್ಲ ಮರವೇ ಎಂದು ತಿಳಿಯುವಂತಿರಲಿಲ್ಲ; ತುಂಬಾ ಹಿಂದೆಯೇ ಅದನ್ನು ಕೆತ್ತಿ ಹಾಳು ಮಾಡಿದಂತಿತ್ತು.



ದೇಗುಲದ ಪ್ರವೇಶದಲ್ಲಿ ಕಾಣಿಸುವ ಆನೆಗಳ ನಡುವಿನ ತೀರ್ಥಂಕರ ಮೂರ್ತಿ

ಮತ್ತೆ ಹಿಂಬದಿಯಿಂದ ಬೆಟ್ಟವನ್ನು ಏರಿ, ಕಲ್ಲಿನ ಮೇಲೆ ಕುಳಿತೆ. ಕೆರೆಯ ಮೇಲಿಂದ ಹಾಯ್ದು ಬಂದ ತಂಪಾದ ಗಾಳಿ, ಏರುಮಧ್ಯಾಹ್ನದ ಬಿಸಿಲನ್ನು ಮರೆಸಿತ್ತು. ಇಡೀ ವಾತಾವರಣ ಪ್ರಶಾಂತವಾಗಿ ಪ್ರಕ್ಷುಬ್ಧ ಮನಸ್ಸನ್ನೂ ಸಂತೈಸುವಂತಿತ್ತು. ಈ ಸ್ಥಳಕ್ಕೆ ಒಂದು ಕಾಲಕ್ಕೆ ದಿವ್ಯ ತೀರ್ಥವೆಂದು ಹೆಸರಿದ್ದರೆ ಅಚ್ಚರಿ ಇರಲಿಲ್ಲ.

## ಪದ್ಮಾವತಿ ಕೆರೆ

ಮೈದಾಳ ಕೆರೆ ಪ್ರಕೃತಿ ಸಹಜವಾದ ಕೆರೆಯಾಗಿ ನನಗೆ ಕಂಡಿತು. ನನ್ನ ಎಡಕ್ಕೆ ಬೆಟ್ಟದ ಇಳಿಜಾರಿನಲ್ಲಿ ಆ ಚಿಕ್ಕ ಕೆರೆ ಕಂಡಿತು. 'ಗೂಗಲ್ ಟೆರೇನ್' ಮ್ಯಾಪ್ ಗಮನಿಸಿದಾಗ, ಸ್ತಬ್ಧನಾದೆ. ಈ ಚಿಕ್ಕ ಕೆರೆ, ಬೆಟ್ಟದ ತಳಭಾಗದ ಕಲ್ಲಿನಲ್ಲಿಯೇ ಕೊರೆದು ಮಾಡಿದಂತೆ ಕಂಡಿತು. ಇದೇ ಮಾಚಿಯಕ್ಕ ಬಸದಿಯ ಉಪಯೋಗಕ್ಕೆಂದು ಕಟ್ಟಿಸಿದ ಕೆರೆ ಇರಬೇಕೆಂದು ಮನವರಿಕೆಯಾಯಿತು.

ಮಂದರಗಿರಿಯ ಭೇಟಿ ಒಮ್ಮೆಗೆ ಮುಗಿಯುವಂತಹದ್ದಾಗಿರಲಿಲ್ಲ. ನಂತರದ ದಿನಗಳಲ್ಲಿ, ಅನೇಕ ಬಾರಿ ಮಂದರಗಿರಿಗೆ ಭೇಟಿ ಕೊಟ್ಟಿದ್ದೇನೆ. ಮೈದಾಳ ಕೆರೆಗೆ ಇಳಿದುಹೋಗಿದ್ದೇನೆ. ಅಂತಹ ಒಂದು ಸಂದರ್ಭದಲ್ಲಿ, ಕೆರೆಯ ದಂಡೆಯ ಮೇಲೆ ಒಂದು ಅತಿ ಪುರಾತನವಾದ ಪುಟ್ಟ ಶಿವಾಲಯ ಕಂಡಿತು. ಅದರ ಬಳಿಯೇ ಏರಿನಿಂತ ಪೊದೆಗಳ ನಡುವೆ ಮುರಿದು ಮುಕ್ಕಾದ ಮೂರು ಅಡಿ ಎತ್ತರದ ಹೆಣ್ಣು ದೇವತೆಗಳ ಎಂಟು ಮೂರ್ತಿಗಳು ಕಂಡವು. ಏಳು ಹೆಣ್ಣು ದೇವರ ಸಮೂಹವನ್ನು 'ಸಪ್ತ ಮಾತೃಕೆ' ಎಂದು ಗುರುತಿಸುವುದುಂಟು. ಇಲ್ಲಿರುವುದು 'ಅಷ್ಟ ಮಾತೃಕೆ'ಯರಿರಬೇಕು. ಅಷ್ಟಮಾತೃಕೆಯ ಪರಿಕಲ್ಪನೆಯೂ ಪುರಾಣದಲ್ಲಿದೆ.

ಮೆಟ್ಟಿಲುಗಳನ್ನು ಬಿಟ್ಟು, ಬಂಡೆಗಳ ಮೇರೆ ಏರುವುದು ನನಗೆ ಖುಷಿ. ಮೈ ಮನಸ್ಸುಗಳ ಮುದಗೊಳಿಸುವ ಮಂದರಗಿರಿ ಮತ್ತೆ ಮತ್ತೆ ಕರೆಯುತ್ತದೆ. ಕಳೆದ ತಿಂಗಳು ಅಲ್ಲಿಗೆ ಹೋದಾಗ, ಬೆಟ್ಟದ ಮೇಲೆ ನವೀಕರಣದ ಕೆಲಸ ನಡೆಯುತ್ತಿತ್ತು. ಬೆಟ್ಟದ ತುದಿಗೇ ತಲುಪುವ ಹೊಸ ಮೋಟಾರು ರಸ್ತೆ ನಿರ್ಮಾಣಗೊಂಡಿತ್ತು. ಜೈನಮುನಿಗಳು ತಪಸ್ಸು ಮಾಡಿದ ಈ ಪವಿತ್ರ ಸ್ಥಳ, ಧ್ಯಾನಸ್ಥ ಸ್ಥಿತಿಗೆ ನಮ್ಮನ್ನು ಕೊಂಡೊಯ್ಯಬಲ್ಲ ಬಸದಿ ಬೆಟ್ಟದ ಪ್ರಶಾಂತ ವಾತಾವರಣ, ಹೀಗೇ ಉಳಿಯಲಿ ಎಂದು ಮನಸ್ಸು ಪ್ರಾರ್ಥಿಸಿತು.

ಇಂಗ್ಲಿಷ್‌ನಿಂದ ಕನ್ನಡಕ್ಕೆ: ನೇಮಿಚಂದ್ರ

ಪ್ರತಿಕ್ರಿಯಿಸಿ: feedback@sudha.co.in